ಮೇಲಿನ ಮೊತ್ತದಲ್ಲಿ ಮಿಶ್ರಾಹುಲಿ ಮಾರಾಟದಿಂದ ರೂ.2,78,174-00 ಮತ್ತು ಮಿಶ್ರಾ ಪಾಶುವಾರು ಗುತ್ತಿಗೆ ಮತ್ತು ಚರಾಜಿನಿಂದ ರೂ. 97858-00 ಆದಾಯ ಬಂದಿರುತ್ತದೆ.

ಶಿವಮೊಗ್ಗ ನಗರದ ಮಹಾತ್ಮಾ ಗಾಂಧಿ ಉದ್ಯಾನವನದಲ್ಲಿ ಮತ್ಸ್ಯಾಲಯ ನಿರ್ಮಾಣ.

1225(1156) ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ (ಶಿವಮೊಗ್ಗ) :— ಮೀನುಗಾರಿಕೆ ಬಂದರು ಹಾಗೂ ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಶಿವಮೊಗ್ಗ ನಗರದ ಮಹಾತ್ಮಗಾಂಧಿ ಉದ್ಯಾನವನದ ಮತ್ಸ್ಯಾಲಯ ನಿರ್ಮಾಣದ ಕಾಮಗಾರಿಯನ್ನು ಕರ್ನಾಟಕ ಸಣ್ಣ ಕೈಗಾರಿಕೆಗಳ ಮಾರುಕಟ್ಟೆ ನಿಗಮ (ನಿ) ಬೆಂಗಳೂರು ಇವರು ನಿರ್ವಹಿಸುತ್ತಿದ್ದು ಇವರ ಕಾಮಗಾರಿಯು ಅನುಮಾನದ ಕೊರತೆಯಿಂದ ಸ್ಥಗಿತಗೊಂಡಿದೆಯೇ?

ಆ) ಮತ್ಸ್ಯಾಲಯ ನಿರ್ಮಾಣದ ಕಾಮಗಾರಿಗೆ ಸರ್ಕಾರದ ಹಣ ಬಿಡುಗಡೆ ಮಾಡಿದೆಯೇ ಮತ್ಸ್ಯಾಲಯ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು? (ವಿವರ ನೀಡುವುದು)

ಶ್ರೀ ಬಿ. ರಮಾನಾಥ ರೈ (ಮೀನುಗಾರಿಕೆ ಬಂದರು ಹಾಗೂ ಪ್ರದೇಶಾಭಿವೃದ್ಧಿ ಸಚಿವರು) :—

ಅ) ಇಲ್ಲ.

ಆ) ಹೌದು. ವಿವರ ಈ ಕೆಳಕಂಡಂತಿದೆ.

1999-2000ನೇ ಸಾಲಿನಲ್ಲಿ	ರೂ.	2,91,600-00
2000-2001ನೇ ಸಾಲಿನಲ್ಲಿ	ರೂ.	5,00,000-00
2001-2002ನೇ ಸಾಲಿನಲ್ಲಿ	ರೂ.	8,70,680-00
	ಒಟ್ಟು	16,62,280-00

ಮತ್ಸ್ಯಾಲಯ ಕಟ್ಟಡದ ಕಾಮಗಾರಿ ಹಾಗೂ ಒಳಾಂಗಣ ಅಲಂಕಾರಿಕ ಕಾಮಗಾರಿಗಳು ಪೂರ್ಣಗೊಂಡಿದ್ದು ಶೀಘ್ರದಲ್ಲಿಯೇ ಸಾರ್ವಜನಿಕ ವೀಕ್ಷಣೆಗೆ ತೆರೆಯಲಾಗುವುದು.

ಶಿವಮೊಗ್ಗ ನಗರದಲ್ಲಿ ದೇವಿ ಪಡಗರ್ಸ್ ಫೈನಾನ್ಸಿಯರ್ಸ್.

1226(ಗಗಶಿಒ) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) :— ಮಾನ್ಯ ಪೌರಾಡಳಿತ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.